## ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 289

**3 ಮಾರ್ಚ್ 2026 * ಮಂಗಳವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗಾಯನ



ವಿದ್ವಾನ್ ಕಾರ್ತಿಕ್ ಮತ್ತೂರ್



ವಿದ್ವಾನ್ ಅನಿರುದ್ಧ್ ಭಾರದ್ವಾಜ್
ವಯೊಲಿನ್



ವಿದ್ವಾನ್ ಫಣೀಂದ್ರ ಭಾಸ್ಕರ
ಮೃದಂಗ



ವಿದ್ವಾನ್ ಶರತ್ ಕೌಶಿಕ್
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಕಾರ್ತಿಕ್ ಮತ್ತೂರ್‌ರವರು** ಪ್ರಸಿದ್ಧ ಕರ್ನಾಟಕ ಸಂಗೀತ ವಿದ್ವಾಂಸರಲ್ಲೊಬ್ಬರು. ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ತಂದೆ ಕರ್ನಾಟಕ ಕಲಾಶ್ರೀ ವಿದ್ವಾನ್ ಎಂ.ಎಸ್. ಅನಂತನಾರಾಯಣರವರ ಬಳಿ ಪಡೆದರು (ಇವರು ಹಿರಿಯ ತಲೆಮಾರಿನ ಸಂಗೀತ ವಿದ್ವಾಂಸರಾದ ಪದ್ಮಶ್ರೀ ಶ್ರೀ ಎಚ್.ಆರ್. ಕೇಶವಮೂರ್ತಿಯವರ ಶಿಷ್ಯರು). ಅನಂತರ ಕರ್ನಾಟಕ ಕಲಾಶ್ರೀ ವಿದ್ವಾನ್ ಹೊಸಹಳ್ಳಿ ಜಿ. ಅನಂತ, ಪದ್ಮಶ್ರೀ ಡಾ. ಆರ್.ಎನ್. ತ್ಯಾಗರಾಜನ್‌ರವರಲ್ಲಿ ಶಿಕ್ಷಣ ಮುಂದುವರಿಕೆ. ಸಂಗೀತದ ಉನ್ನತ ಶಿಕ್ಷಣವನ್ನು ಪ್ರಸ್ತುತ ಸಂಗೀತಕಲಾರತ್ನ ಬೆಂಗಳೂರು ಎಸ್. ಶಂಕರ್ ಮತ್ತು ಗಾನಕಲಾಭೂಷಣ ವಿದುಷಿ ಆರ್.ಎನ್. ಶ್ರೀಲತಾರವರ ಬಳಿ ಪಡೆಯುತ್ತಿದ್ದಾರೆ. ಆಕಾಶವಾಣಿಯ 'ಬಿ' ಶ್ರೇಣಿ ಕಲಾವಿದರಾಗಿರುವ ಇವರು ನಾಡಿನ ಹಲವಾರು ಪ್ರತಿಷ್ಠಿತ ಸಂಗೀತೋತ್ಸವಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಎಂ.ಟೆಕ್. ಪದವೀಧರರಾಗಿದ್ದು, ಬೆಂಗಳೂರಿನ ದಯಾನಂದ ಸಾಗರ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಪಿಎಚ್.ಡಿ. ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಬೆಂಗಳೂರಿನಲ್ಲಿ ಅರುಣೋದಯ ಸ್ಕೂಲ್ ಆಫ್ ಮ್ಯೂಸಿಕ್ ಸಂಸ್ಥೆಯ ಸ್ಥಾಪಕ ಸದಸ್ಯರಲ್ಲೊಬ್ಬರು. ಅದರ ಮೂಲಕ ಗಾಯನ, ಪಿಟೀಲು, ಮೃದಂಗಗಳಲ್ಲಿ ನೂರಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರ ಪ್ರತಿಭೆಗೆ ಸಾಣೆ ಹಿಡಿಯುವ ಸಾರ್ಥಕ ಕೆಲಸದಲ್ಲಿ ತೊಡಗಿದ್ದಾರೆ.

**ವಿದ್ವಾನ್ ಅನಿರುದ್ಧ್ ಭಾರದ್ವಾಜ್‌ರವರು** ಆರನೆಯ ವರ್ಷದಿಂದಲೇ ವಯೊಲಿನ್ ವಾದನವನ್ನು ಕಲಿಯಲು ಆರಂಭಿಸಿದರು. ಇವರ ಮೊದಲ ಗುರುಗಳು ವಿದ್ವಾನ್ ಎನ್. ವೆಂಕಟೇಶ್‌ರವರು. ಕೆಲವು ವರ್ಷಗಳ ಬಳಿಕ ಡಾ. ಸಿ.ಎ. ನಟರಾಜ್

ಮತ್ತು ವಿದ್ವಾನ್ ಡಿ. ಬಾಲಕೃಷ್ಣರವರ ಬಳಿ ಕಲಿಕೆಯನ್ನು ಮುಂದುವರಿಸಿದರು. ವಿದ್ವಾನ್ ಎಸ್. ಶೇಷಗಿರಿರಾವ್‌ರವರ ಮಾರ್ಗದರ್ಶನದಲ್ಲಿ ಇವರ ಕಲಾನೈಪುಣ್ಯ ಮತ್ತಷ್ಟು ಪ್ರಬುದ್ಧವಾಗಿ ರೂಪುಗೊಂಡಿದೆ. ವಯೊಲಿನ್ ವಾದನದ ಉನ್ನತ ಶಿಕ್ಷಣವನ್ನು ವಿದ್ವಾಂಸರುಗಳಾದ ಮೈಸೂರು ಎಂ. ನಾಗರಾಜ್ ಮತ್ತು ಡಾ. ಮೈಸೂರು ಎಂ. ಮಂಜುನಾಥ್ ಅವರ ಬಳಿ ಪಡೆಯುತ್ತಿದ್ದಾರೆ. ಆಕಾಶವಾಣಿಯ 'ಬಿ' ಹೈ ಶ್ರೇಣಿ ಕಲಾವಿದರಾದ ಇವರು ಕರ್ನಾಟಕ ಫೈನ್ ಆರ್ಟ್ಸ್ ಕೌನ್ಸಿಲ್ಲಿನಿಂದ 2018ರಲ್ಲಿ 'ಕಲಾವಂತ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ವಿಶೇಷ ವಿದ್ಯಾರ್ಥಿವೇತನ ಪಡೆದಿರುವುದು ಇವರ ಹೆಗ್ಗಳಿಕೆ.

**ವಿದ್ವಾನ್ ಫಣೀಂದ್ರ ಭಾಸ್ಕರರವರು** ಲಯಕಲಾ ಪ್ರತಿಭಾಮಣಿ, ಗಾನಕಲಾಶ್ರೀ ವಿದ್ವಾನ್ ಎಚ್.ಎಸ್. ಸುಧೀಂದ್ರರವರ ಶಿಷ್ಯರು. ಕರ್ನಾಟಕ ರಾಜ್ಯ ಶಿಕ್ಷಣ ಮಂಡಳಿಯ ಮೃದಂಗ ಸೀನಿಯರ್ ಪರೀಕ್ಷೆಯಲ್ಲಿ ಎರಡನೇ ರ್‍ಯಾಂಕ್ ಪಡೆದಿರುವರು. ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಫೆಲೋಶಿಪ್ ಪಡೆದಿರುವರು. ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರು. ಇವರ ಅಪೂರ್ವ ವಿದ್ವತ್ತಿಗಾಗಿ ಮಲ್ಲೇಶ್ವರಂ ಸಂಗೀತ ಸಭೆ ಮತ್ತು ಅನನ್ಯ ಸಂಸ್ಥೆಯ 'ಅನನ್ಯ ಯುವ ಪ್ರತಿಭೆ ಪ್ರಶಸ್ತಿ', 'ಅತ್ಯುತ್ತಮ ಮೃದಂಗ ವಾದಕ' ಪ್ರಶಸ್ತಿ, ಅನನ್ಯ ನಾದಜ್ಯೋತಿ ಕಲಾ ಪುರಸ್ಕಾರ ಮತ್ತು ಪರ್ಕಸಿವ್ ಆರ್ಟ್ಸ್ ಸೆಂಟರ್‌ನ ಪಿಎಸಿ–ಸಿಎಂಎಎನ್‌ಎ ಪುರಸ್ಕಾರಗಳು ದೊರೆತಿವೆ.

ವಿದ್ವಾನ್ ಶರತ್ ಕೌಶಿಕ್‌ರವರು ಕರ್ನಾಟಕದ ಉದಯೋನ್ಮುಖ ಪ್ರತಿಭಾವಂತ ಕಲಾವಿದರಲ್ಲೊಬ್ಬರು. ಇವರು ಮೃದಂಗ ಮತ್ತು ಘಟಂ ವಾದನದಲ್ಲಿ ಪ್ರಾವೀಣ್ಯತೆ ಗಳಿಸಿದ್ದಾರೆ. ವಿದ್ವಾನ್ ವಿ.ಎಸ್. ರಮೇಶ್‌ರವರ ಬಳಿ ಪ್ರಾರಂಭಿಕ ಶಿಕ್ಷಣ ಪಡೆದ ಇವರು ಪ್ರಸ್ತುತ ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಮೃದಂಗ ವಾದನದ ಸೂಕ್ಷ್ಮತೆಗಳನ್ನು ಕಲಿಯುತ್ತಿರುವರು. ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಕಾಗ್ನಿಸೆಂಟ್ (ಸಿಬಿಎಸ್) ಸಾಫ್ಟ್‌ವೇರ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಬೆಳದಿಂಗಳ ಸಂಗೀತ 290

**1 ಏಪ್ರಿಲ್ 2026**

**ಸಿತಾರ ವಾದನ**
**ಪಂ. ಮೊಹಸಿನ್ ಖಾನ್**

**ತಬಲ**
**ಪಂ. ರಾಜೇಂದ್ರ ನಾಕೋಡ**

☎ 0821–2548221, 2548223 * ✉ sutturmath@jssonline.org